# ಕನ್ನಡ ಪೋಸ್ಟ್

ಇದು ಸುದ್ದಿ ವಿಳಾಸ

KANNADA POST

ಸಂಪಾದಕ : ಮಂಜು ಬನವಾಸೆ

ಕನ್ನಡ ದಿನ ಪತ್ರಿಕೆ Kannada Daily

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.01 | Issue. 132 | Pages. 2 | Date: 25-03-2025, WEDNESDAY | RNI NO: KARKAN/2024/89601

ಸಂಪುಟ : 01 - ಸಂಚಿಕೆ : 132 - ಪುಟಗಳು : 2 - 25 ಮಾರ್ಚ್ 2025 ಬುಧವಾರ | Ph: 8762954248 | ದರ : ₹1


# ನರೇಗಾ ಡಿ.ಪಿ.ಆರ್. ಅನುಮೋದನೆಗೆ ಕಮಿಷನ್..?

## ಅರಸೀಕೆರೆ ತಾಲ್ಲೂಕಿನಲ್ಲಿ ಪ್ರಕರಣ ಬೆಳಕಿಗೆ | ಆಡಿಯೋ ಸಮೇತ ಗ್ರಾಪಂ ಸದಸ್ಯರ ಆರೋಪ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಗ್ರಾಮೀಣ ಭಾಗದ ದುಡಿಯುವ ಕೈಗಳಿಗೆ ಉದ್ಯೋಗ ಕಲ್ಪಿಸಬೇಕು, ಅನಕ್ಷರಸ್ಥ ಕುಟುಂಬಗಳು ಆರ್ಥಿಕವಾಗಿ ಚೇತರಿಕೆ ಕಾಣಬೇಕೆಂದು ಕೇಂದ್ರ ಸರ್ಕಾರ ಜಾರಿಗೊಳಿಸಿದ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಗೆ ಜಿಲ್ಲೆಯಲ್ಲಿ ಕಮಿಷನ್ ಕಾಟ ತಲೆದೋರಿದೆ.

2025-26ನೇ ಸಾಲಿನ ನರೇಗಾ ಯೋಜನೆ ಹೆಚ್ಚುವರಿ ಕ್ರಿಯಾ ಯೋಜನೆಗಾಗಿ ಪ್ರತಿ ಸದಸ್ಯರಿಂದ ಶೇ. 2 ಕಮಿಷನ್ ಪಡೆಯಲಾಗಿದೆ ಎಂಬ ಗಂಭೀರ ಆರೋಪ ಅರಸೀಕೆರೆ ತಾಲ್ಲೂಕಿನಲ್ಲಿ ಕೇಳಿಬಂದಿದೆ.

ನರೇಗಾ ಯೋಜನೆಯಡಿ ಜಿಲ್ಲೆಯಲ್ಲಿ ಅವ್ಯಾಹತ ಭ್ರಷ್ಟಾಚಾರ ನಡೆಯುತ್ತಿದೆ ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದ್ದರು. ಕೇಂದ್ರ ಸರ್ಕಾರದ ಅನುದಾನವನ್ನು ಬೇಕಾಬಿಟ್ಟಿ ಖರ್ಚು ಮಾಡುತ್ತಿದ್ದಾರೆ. ಒಂದೇ ಗ್ರಾಮಕ್ಕೆ 80 ಲಕ್ಷ ರೂ. ವರೆಗೆ ಕಾಮಗಾರಿ ನೀಡಿರುವುದು ಅನುಮಾನ ಹುಟ್ಟಿಸಿದೆ ಎಂದು ಅವರು ಹೇಳಿದ್ದರು. ಈ ಬೆನ್ನಲ್ಲೇ ಅರಸೀಕೆರೆ ತಾಲ್ಲೂಕಿನ ಪುರ್ಲೇಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರು ಆಡಿಯೋ ಸಮೇತ ಮಾಹಿತಿ ಬಹಿರಂಗಪಡಿಸಿದ್ದು ಚರ್ಚೆಗೆ ಗ್ರಾಸವಾಗಿದೆ.



> ನರೇಗಾ ಡಿಪಿಆರ್ ಅನುಮೋದನೆಗೆ ಕಮಿಷನ್ ಕೇಳುತ್ತಿರುವ ಕುರಿತು ಯಾವುದೇ ದೂರು ಬಂದಿಲ್ಲ. ನಮ್ಮ ಕಚೇರಿಗೆ ದೂರು ಬಂದಿದ್ದರೆ ಸ್ವೀಕೃತಿ ವಿಭಾಗದಿಂದ ಮಾಹಿತಿ ತರಿಸಿಕೊಳ್ಳುತ್ತೇನೆ. ಪಿಡಿಒ ಅಥವಾ ತಾಪಂ ಇಒ ಪ್ರಮಾದ ಎಸಗಿದ್ದರೆ ನೋಟಿಸ್ ಜಾರಿ ಮಾಡಲಾಗುವುದು.
>
> **- ಬಿ.ಆರ್. ಪೂರ್ಣಿಮಾ, ಜಿಪಂ ಸಿಇಒ**

> ಕಮಿಷನ್ ಕೊಟ್ಟರಷ್ಟೇ ನರೇಗಾ ಯೋಜನೆ ಡಿಪಿಆರ್ ಅನುಮೋದನೆಯಾಗುತ್ತಿದೆ. ಈ ಕುರಿತು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರು ಹಾಗು ಜಿಲ್ಲಾ ಪಂಚಾಯಿತಿಗೆ ದೂರು ಸಲ್ಲಿಸಲಾಗಿದೆ. ಭ್ರಷ್ಟ ಅಧಿಕಾರಿಗಳಿಂದ ಸಮಸ್ಯೆಯಾಗುತ್ತಿದೆ.
>
> **-ಜಯರಾಮ್, ಗ್ರಾಪಂ ಸದಸ್ಯ**

> 2025-26ನೇ ಸಾಲಿನ ನರೇಗಾ ಕ್ರಿಯಾ ಯೋಜನೆಯ ಹಣ ಇನ್ನೂ ಬಿಡುಗಡೆಯಾಗಿಲ್ಲ. ಅದಕ್ಕಿಂತ ಮೊದಲು ಹೆಚ್ಚುವರಿ ಕಾಮಗಾರಿಗೆ ಬಿಲ್ ಮಾಡಲಾಗಿದೆ. 2024-25ನೇ ಸಾಲಿನಲ್ಲಿ ಜಿಲ್ಲೆಯಾದ್ಯಂತ 220.51 ಕೋಟಿ ರೂ.ಗಳನ್ನು ಜಿಲ್ಲಾ ಪಂಚಾಯಿತಿ ಖರ್ಚು ಮಾಡಿದೆ. 44 ಲಕ್ಷ ಮಾನವ ದಿನಗಳ ಸೃಜನೆ ಮಾಡಲಾಗಿತ್ತು. 2025-26ನೇ ಸಾಲಿಗೆ ಕ್ರಿಯಾ ಯೋಜನೆ ಸಿದ್ಧಪಡಿಸಲಾಗುತ್ತಿದ್ದು 40 ಲಕ್ಷ ಮಾನವ ದಿನಗಳ ಸೃಜನೆಗೆ ಗುರಿ ಹಾಕಿಕೊಳ್ಳಲಾಗಿದೆ.

ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ಸದಸ್ಯರು ಈ ಸಮಸ್ಯೆಗೆ ಸಿಲುಕಿದ್ದು ಅರಸೀಕೆರೆ ತಾಲ್ಲೂಕಿನ 42 ಗ್ರಾ.ಪಂ.ಗಳಿಂದ 4 ಕೋಟಿ ರೂ. ಲಂಚ ಸಂಗ್ರಹವಾಗಿದೆ ಎಂದು ಪುರ್ಲೇಹಳ್ಳಿ ಪಂಚಾಯಿತಿ ಸದಸ್ಯ ಜಯರಾಮ್ ಗಂಭೀರ ಆರೋಪ ಮಾಡಿದ್ದಾರೆ. ಈ ಸಂಬಂಧ ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಹಾಗು ಗ್ರಾಮೀಣಾಭಿವೃದ್ಧಿ ಇಲಾಖೆ ಆಯುಕ್ತರಿಗೆ 2024ರ ಡಿ. 11 ರಂದು ಪತ್ರ ಬರೆದಿದ್ದಾರೆ. ಇಲ್ಲಿವರೆಗೆ ಯಾವ ಪ್ರತಿಕ್ರಿಯೆ ಬಂದಿಲ್ಲ.

ಪುರ್ಲೇಹಳ್ಳಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಸದಸ್ಯರಿಗೆ ಶೇ. 2 ರಷ್ಟು ಕಮಿಷನ್ ಕೊಡಬೇಕೆಂದು ಹೇಳಿರುವ ಆಡಿಯೋ ವೈರಲ್ ಆಗಿದೆ.



ಸಾಂದರ್ಭಿಕ ಚಿತ್ರ

ಸದಸ್ಯ ಜಯರಾಂ ಅವರು ದೂರವಾಣಿ ಮೂಲಕ ಸಂಪರ್ಕಿಸಿದಾಗ ಮಾತನಾಡಿರುವ ಪಿಡಿಒ, ಗ್ರಾ.ಪಂ.ಗೆ 1.10 ಕೋಟಿ ರೂ. ವೆಚ್ಚದ ಹೆಚ್ಚುವರಿ ಕ್ರಿಯಾ ಯೋಜನೆ ತಯಾರಾಗಿದೆ. 2.40 ಲಕ್ಷ ರೂ. ಕಮಿಷನ್ ಕೊಟ್ಟಿದ್ದಾರೆ.

10 ರಿಂದ 15 ಸಾವಿರ ರೂ. ಮಾತ್ರ ಬಾಕಿಯಿದೆ. ಎಲ್ಲಾ ಸದಸ್ಯರು ಹಣ ಕೊಟ್ಟಿದ್ದಾರೆ ಒಂದು ವೇಳೆ ಯಾವುದಾದರು ಸದಸ್ಯ ಹಣ ಕೊಟ್ಟಿಲ್ಲ ಎಂದರೆ ಅವರನ್ನು ಎದುರಿಗೆ ಕರೆದುಕೊಂಡು ಬಂದು ಹೇಳಿಸಿ ಎಂದು ಸದಸ್ಯರಿಗೆ ಪ್ರತಿಕ್ರಿಯಿಸಿದ್ದಾರೆ.

ಜಿಲ್ಲೆಯಲ್ಲಿ 267 ಗ್ರಾಮ ಪಂಚಾಯಿತಿಗಳಿದ್ದು ಅರಸೀಕೆರೆ ತಾಲ್ಲೂಕಿನಲ್ಲಿ 42 ಇವೆ.

ಕೇವಲ ಅರಸೀಕೆರೆಯಲ್ಲಿ 4 ಕೋಟಿ ರೂ. ನಷ್ಟು ಲಂಚ ಸಂಗ್ರಹವಾಗಿದೆ ಎಂದು ಸದಸ್ಯರು ಆರೋಪಿಸಿದ್ದಾರೆ.



ಹಾಸನ: ಬೀದರ್‌ನ ಪುಟ್ಟದೇವರು ರಂಗಮಂದಿರದಲ್ಲಿ ರಂಗಭೂಮಿ ಕಲಾವಿದ ಬಿ.ಟಿ. ಮಾನವ ಅವರಿಗೆ 2024-25ನೇ ಸಾಲಿನ ಕರ್ನಾಟಕ ಜಾನಪದ ಅಕಾಡೆಮಿ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೋಲಹಳ್ಳಿ ಶಿವಪ್ರಸಾದ್, ಕಲಬುರಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಬಸವರಾಜ್ ಹೂಗಾರ್, ಅಕಾಡೆಮಿ ಸದಸ್ಯರಾದ ದೇವಾನಂದ ವರಪ್ರಸಾದ್, ಮಲ್ಲಿಕಾರ್ಜುನ್ ಕೆಂಕೆರೆ ಇತರರಿದ್ದರು.



ಹಾಸನ ಕೃಷಿ ಕಾಲೇಜನ್ನು ಮಂಡ್ಯ ಕೃಷಿ ವಿಶ್ವವಿದ್ಯಾಲಯದೊಂದಿಗೆ ವಿಲೀನ ಮಾಡಬಾರದು ಎಂದು ಮಾಜಿ ಸಚಿವ ಹೆಚ್.ಡಿ. ರೇವಣ್ಣ ಅವರ ನೇತೃತ್ವದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಲಾಯಿತು. ಶಾಸಕರಾದ ಎ. ಮಂಜು, ಹೆಚ್.ಪಿ. ಸ್ವರೂಪ್, ವಿಧಾನ ಪರಿಷತ್ ಮಾಜಿ ಸದಸ್ಯ ತಿಪ್ಪೇಸ್ವಾಮಿ ಇದ್ದರು.

## ಮೆಕ್ಕೆಜೋಳದ ಹೊಲಕ್ಕೆ ಕಾಡಾನೆಗಳ ಲಗ್ಗೆ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಅರಕಲಗೂಡು: ತಾಲ್ಲೂಕಿನ ಮಲ್ಲಿಪಟ್ಟಣ ಹೋಬಳಿ ನೆಲಬಳ್ಳಿ ಗ್ರಾಮದಲ್ಲಿ ಸೋಮವಾರ ರಾತ್ರಿ ಕಾಡಾನೆ ಹಿಂಡು ಮೋಹನ್ ಎಂಬುವವರ ಜಮೀನಿನಲ್ಲಿ ಬೆಳೆದಿದ್ದ ಲಕ್ಷಾಂತರ ರೂ. ಮೌಲ್ಯದ ಬೆಳೆ ನಾಶಪಡಿಸಿವೆ.

ಕಟಾವು ಹಂತದಲ್ಲಿದ್ದ ಬೆಳೆ ನಾಶವಾಗಿರುವುದರಿಂದ ರೈತ ನಷ್ಟಕ್ಕೀಡಾಗಿದ್ದಾರೆ. ರೈತನಿಗೆ ಆದಾಯ ತಂದುಕೊಡಬೇಕಿದ್ದ ಜೋಳದ ಮೇತೆಗಳು ಹೊಲದ ತುಂಬೆಲ್ಲಾ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಇಡೀ ರಾತ್ರಿ ಜಮೀನಿನಲ್ಲೇ ಕಳೆದಿರುವ ಹಿಂಡು ಆನೆ ಅಲ್ಲೇ ಲದ್ದಿ ಹಾಕಿ ಹೋಗಿವೆ.



ವಾರದ ಹಿಂದೆ ಇದೇ ಜಾಗದಲ್ಲಿ ವಿದ್ಯುತ್ ತಗುಲಿ ಒಂಟಿ ಸಲಗ ಸಾವನ್ನಪ್ಪಿತ್ತು. ಆಗ ರೈತರ ಮೇಲೆ ಕೇಸು ಹಾಕಲು ಅರಣ್ಯ ಇಲಾಖೆಯವರು ಮುಂದಾಗಿದ್ದರು. ಈಗ ಆಗಿರುವ ಬೆಳೆನಷ್ಟಕ್ಕೆ ಯಾರ ಮೇಲೆ ಕೇಸು ಹಾಕುತ್ತಾರೆ ಎಂದು ರೈತರು ಪ್ರಶ್ನಿಸಿದರು. ಸಾಲ ಮಾಡಿ ಬೆಳೆದ ಫಸಲು ಈಗ ಮಣ್ಣು ಪಾಲಾಗಿದೆ. ಸಾಲ ತೀರಿಸಲು ನಾವೇನು ಮಾಡಬೇಕು ಎಂದು ಪ್ರಶ್ನಿಸಿರುವ ರೈತ, ಜೀವ ಭಯದಿಂದ ನಮಗೆ ಜಮೀನು ಬಳಿಗೆ ಬರಲು ಭಯವಾಗುತ್ತಿದೆ. ಇದು ಮರುಕಳಿಸದಂತೆ ಕೂಡಲೇ ಕಾಡಾನೆ ಸಮಸ್ಯೆಗೆ ಕಡಿವಾಣ ಹಾಕುವಂತೆ ಒತ್ತಾಯಿಸಿದ್ದಾರೆ.

## ಬಡಾವಣೆ ನಿವಾಸಿಗಳ ಸಮಸ್ಯೆ ಆಲಿಸಿದ ಶಾಸಕ ಸ್ವರೂಪ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ನಗರದ ಬಿ.ಟಿ. ಕೊಪ್ಪಲು, ಎಸ್.ಬಿ.ಎಂ. ಕಾಲೋನಿ ಹಾಗೂ ಬಿ. ಕಾಟಿಹಳ್ಳಿ ಬಡಾವಣೆಗಳಿಗೆ ಮಂಗಳವಾರ ಭೇಟಿ ನೀಡಿದ ಶಾಸಕ ಹೆಚ್.ಪಿ. ಸ್ವರೂಪ್ ಯುಜಿಡಿ ಸಮಸ್ಯೆ ಪರಿಶೀಲಿಸಿದರು.

ಕರ್ನಾಟಕ ಒಳಚರಂಡಿ ಹಾಗು ನೀರು ಸರಬರಾಜು ಇಲಾಖೆ, ನಗರಸಭೆ ಅಧಿಕಾರಿಗಳ ಜೊತೆ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ವಾಸಿಗಳ ಅಹವಾಲು ಸ್ವೀಕರಿಸಿದರು.

ಶಾಸಕ ಸ್ವರೂಪ್ ಮಾತನಾಡಿ, ಈ ಬಡಾವಣೆಗಳಲ್ಲಿ ಹಲವು ದಿನಗಳಿಂದ ಯುಜಿಡಿ ಸಮಸ್ಯೆಯಿಂದ ಜನರು ತೊಂದರೆ ಅನುಭವಿಸುತ್ತಿದ್ದಾರೆ. ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕಾಮಗಾರಿ ಪ್ರಾರಂಭಿಸಬೇಕು ಎಂದರು. ಬಡಾವಣೆಗಳಿಗೆ ಪ್ರಮುಖವಾಗಿ ಬೇಕಾಗಿರುವ ಮೂಲಸೌಕರ್ಯಗಳ ಪೈಕಿ ಯುಜಿಡಿ ಪ್ರಮುಖವಾಗಿದೆ. ಕೂಡಲೇ ವೈಜ್ಞಾನಿಕವಾಗಿ ಕಾಮಗಾರಿ ನಡೆಸಿ ಬಡಾವಣೆ ಜನರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಕೂಡಲೇ ಅಧಿಕಾರಿಗಳು ಕಾರ್ಯೋನ್ಮುಖರಾಗಬೇಕು ಎಂದು ಸೂಚನೆ ನೀಡಿದರು.



## ಸರಣಿ ಕಳ್ಳತನ : ಅಪ್ರಾಪ್ತ ವಶಕ್ಕೆ



ಆಲೂರು: ಪಟ್ಟಣ ಹಾಗೂ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ನಡೆದಿದ್ದ ಮನೆಗಳ್ಳತನ ಪ್ರಕರಣ ಬೇಧಿಸಿರುವ ಆಲೂರು ಪೊಲೀಸರು ಹಣ ಹಾಗೂ ಚಿನ್ನಾಭರಣ ವಶಕ್ಕೆ ಪಡೆದಿದ್ದಾರೆ.

ಆರೋಪಿಯಾಗಿರುವ ಕಾನೂನು ಸಂಘರ್ಷಕ್ಕೆ ಒಳಗಾದ ಅಪ್ರಾಪ್ತನನ್ನು ವಶಕ್ಕೆ ಪಡೆದು ಬಾಲಮಂದಿರದ ವಶಕ್ಕೆ ನೀಡಿದ್ದಾರೆ. 25 ಲಕ್ಷ ರೂ. ಬೆಲೆ ಬಾಳುವ 284 ಗ್ರಾಂ ಚಿನ್ನ ಹಾಗೂ 58555 ರೂಪಾಯಿ ನಗದನ್ನು ವಶಪಡಿಸಿಕೊಂಡು, ಸ್ವತ್ತಿನ ವಾರಸುದಾರರಾದ ಮಾವನೂರು ಗ್ರಾಮದ ವಿರೂಪಾಕ್ಷ, ಪಟ್ಟಣದ ಮೀನಾಕ್ಷಮ್ಮ, ರೇಣುಕಮ್ಮ ರಾಧಾ ಹಾಗೂ ಯಶೋಧ ಅವರಿಗೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಪಿ.ಐ ನಿರಂಜನ್ ಕುಮಾರ್, ಪಿಎಸ್ಐ ಜನಾಭಾಯಿ ಕಡಪಟ್ಟಿ, ಸಿಬ್ಬಂದಿ ಪೂರ್ಣೇಂದ್ರ, ಪುನೀತ್, ಹರೀಶ್, ಅಶೋಕ್, ರವಿ, ಸಕಲೇಶಪುರ ಗ್ರಾಮಾಂತರ ಠಾಣೆಯ ಸುನಿಲ್ ಕುಮಾರ್, ಶಶಾಂಕ್ ಮುಂತಾದವರು ಭಾಗವಹಿಸಿದ್ದರು.

## ಆತ್ಮಹತ್ಯೆಗೆ ಶರಣಾದ ರೈತ

ಅರಸೀಕೆರೆ: ಕೃಷಿಗಾಗಿ ಮಾಡಿಕೊಂಡಿದ್ದ ಸಾಲ ತೀರಿಸಲಾಗದೆ ಜಿಗುಪ್ಸೆಗೊಂಡಿದ್ದ ರೈತ ಮಂಗಳವಾರ ಆತ್ಮಹತ್ಯೆಗೆ ಶರಣಾಗಿದ್ದಾರೆ.


ತಾಲ್ಲೂಕಿನ ದಾಸಿಹಳ್ಳಿ ಗ್ರಾಮದ ಬೈರೇಶ್ (42) ಮೃತರು. ಕೃಷಿ ಚಟುವಟಿಕೆಗಾಗಿ ಕೈಸಾಲ ಹಾಗೂ ವಿವಿಧ ಮೈಕ್ರೋ ಫೈನಾನ್ಸ್‌ಸೇರಿ 6 ಲಕ್ಷ ರೂ. ಸಾಲ ಮಾಡಿಕೊಂಡಿದ್ದರು. ಮೃತರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. ದಾಸಿಹಳ್ಳಿ ಗ್ರಾಮಕ್ಕೆ ಸಂಜೆ ಭೇಟಿ ನೀಡಿದ ಶಾಸಕ ಕೆ.ಎಂ. ಶಿವಲಿಂಗೇಗೌಡ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.

## ಕಾನೂನು ಅರಿತರೆ ಪ್ರಜಾಪ್ರಭುತ್ವ ಗಟ್ಟಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ದೋಷಪೂರಿತ ಪ್ರಜಾಪ್ರಭುತ್ವ ವ್ಯವಸ್ಥೆ ಹೊಂದಿರುವ ವಿಶ್ವದ 51 ರಾಷ್ಟ್ರಗಳ ಪೈಕಿ ಭಾರತವು ಒಂದು. ಪ್ರಜಾಪ್ರಭುತ್ವ ಗಟ್ಟಿಯಾಗಬೇಕೆಂದರೆ ಎಲ್ಲರೂ ಕಾನೂನು ಅರಿಯಬೇಕು ಎಂದು ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಡಾ. ಕೆ.ವಿ. ಪಾರ್ಥೇಶ್ ಹೇಳಿದರು.

ನಗರದ ಆರ್.ಸಿ. ರಸ್ತೆಯ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಭಾರತದಲ್ಲಿ ಪ್ರಜಾಪ್ರಭುತ್ವದ ಪ್ರಸ್ತುತತೆ ಎಂಬ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೇಶದಲ್ಲಿನ ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ಹೆಚ್ಚುತ್ತಿರುವ ಜನಸಂಖ್ಯೆ, ಅಧಿಕಾರ ದುರುಪಯೋಗ, ಕೋಮುವಾದ, ಅನಕ್ಷರತೆ ಇವುಗಳಿಂದ ಪ್ರಜಾಪ್ರಭುತ್ವ ವ್ಯವಸ್ಥೆ ದೋಷಪೂರಿತವಾಗಲು ಕಾರಣವಾಗಿದೆ. ಪ್ರಜಾಪ್ರಭುತ್ವ ಉಳಿಯಬೇಕಾದರೆ ಪ್ರತಿಯೊಬ್ಬ ನಾಗರಿಕನಿಗೂ ಶಿಕ್ಷಣವನ್ನು ನೀಡಬೇಕು ಹಾಗೂ ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗಗಳು ತಮ್ಮ ತಮ್ಮ ತಪ್ಪುಗಳನ್ನು ಸರಿಪಡಿಸಿಕೊಂಡು ನ್ಯಾಯಯುತವಾಗಿ ಕಾರ್ಯ ನಿರ್ವಹಿಸಬೇಕು. ಮಾಧ್ಯಮಗಳು ಇದರಲ್ಲಿ ಸ್ವ-ಹಿತಾಸಕ್ತಿ ನೋಡದೆ ಸತ್ಯ ಪಾರದರ್ಶಕತೆಯಿಂದ ಕಾರ್ಯನಿರತವಾಗಬೇಕು. ಅಷ್ಟೇ ಅಲ್ಲದೆ ಭಾರತದ ಪ್ರಜೆಗಳಾದ ನಾವು ಪ್ರಜಾಪ್ರಭುತ್ವವನ್ನು ಉಳಿಸಿಕೊಂಡು ಹೋಗಬೇಕು ಎಂದರು.



ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ದೇಶದ ಪ್ರತಿಯೊಬ್ಬ ನಾಗರಿಕರು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯವನ್ನು ಅಳವಡಿಸಿಕೊಳ್ಳಬೇಕು. ಹಾಗೆಯೇ ಯಾವುದೇ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಲಿಂಗಭೇದ ಭಾವದ ಯಾವುದೇ ತಾರತಮ್ಯವಿಲ್ಲದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಎಲ್ಲರೂ ಒಂದೇ ಎಂಬ ಮನೋಭಾವದಿಂದ ಬದುಕಬೇಕು ಎಂದು ತಿಳಿಸಿದರು.

ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಜಿ. ಸುನೀತ, ಐ.ಕ್ಯೂ.ಎ.ಸಿ. ಸಂಚಾಲಕ ಜಿ.ಆರ್. ಮೋಹನ್ ಕುಮಾರ್, ಉಪನ್ಯಾಸಕ ಸಿ. ಶಿವಪ್ಪ ಹಾಗೂ ಇತರರು ಹಾಜರಿದ್ದರು.

## ಕಾಡಾನೆಗೆ ರೇಡಿಯೋ ಕಾಲರ್ ಮೊದಲ ದಿನ ಸಿಗಲಿಲ್ಲ ಯಶಸ್ಸು




ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಬೇಲೂರು: ಕಾಡಾನೆಗಳ ಗುಂಪಿನಲ್ಲಿದ್ದ ಪುಂಡಾನೆಯನ್ನು ಬೇರ್ಪಡಿಸಲು ಸಾಧ್ಯವಾಗದೆ ರೇಡಿಯೋ ಕಾಲರ್ ಅಳವಡಿಕೆ ಕಾರ್ಯಾಚರಣೆ ಮಂಗಳವಾರ ಸಫಲತೆ ಕಾಣಲಿಲ್ಲ.

ಹೀಗಾಗಿ ಸಾಕಾನೆಗಳು ಬಿಕ್ಕೋಡು ಕ್ಯಾಂಪ್‌ಗೆ ವಾಪಸ್ಸಾದವು. ಮೂರು ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಯಶಸ್ವಿಯಾಗಿರುವ ಕುಮ್ಕಿ ಆನೆಗಳಾದ ಪ್ರಶಾಂತ್, ಕಂಜನ್, ಧನಂಜಯ, ಮಹೇಂದ್ರ, ಹರ್ಷ, ಕರ್ನಾಟಕ ಭೀಮ ಹಾಗೂ ಏಕಲವ್ಯ ಅವರಿಂದ ಎರಡು ಕಾಡಾನೆಗಳಿಗೆ ರೇಡಿಯೋ ಕಾಲರ್ ಅಳವಡಿಕೆ ಕಾರ್ಯಾಚರಣೆ ಕೈಗೊಳ್ಳಲಾಗಿದೆ.

ಬೆಳಿಗ್ಗೆ ತಾಲ್ಲೂಕಿನ ವಾಟೇಹಳ್ಳಿ ಗ್ರಾಮದಿಂದ ಕಾರ್ಯಾಚರಣೆ ಆರಂಭವಾಯಿತು. ಇಟಿಎಫ್ ಸಿಬ್ಬಂದಿ ಮಾಹಿತಿ ಆಧರಿಸಿ ಬಿಕ್ಕೋಡು ಕ್ಯಾಂಪ್‌ನಿಂದ ಸಾಕಾನೆಗಳನ್ನು ಕರೆತರಲಾಯಿತು. ಪುಂಡಾನೆಯೊಂದನ್ನು ಸಿಬ್ಬಂದಿ ಗುರುತಿಸಿದರಾದರೂ ಕಾಡಾನೆ ಗುಂಪಿನಲ್ಲಿದ್ದರಿಂದ ಬೇರ್ಪಡಿಸಲು ಸಾಧ್ಯವಾಗಲಿಲ್ಲ. ಕಾಡಾನೆಗಳು ಒಂದೇ ಜಾಗದಲ್ಲಿ ನಿಲ್ಲದೆ ಓಡಾಡಿಕೊಂಡಿದ್ದರಿಂದ ಬೇರ್ಪಡಿಸುವ ಕೆಲಸವು ಕೈಗೂಡಲಿಲ್ಲ. ಕಾಫಿ ತೋಟ, ದಟ್ಟ ಅರಣ್ಯದೊಳಗೆ ಕಾಡಾನೆಗಳು ತೆರಳಿದ್ದರಿಂದ ಏನೂ ಮಾಡಲು ಆಗಲಿಲ್ಲ. ಕಾರ್ಯಾಚರಣೆಯನ್ನು ಬುಧವಾರಕ್ಕೆ ಮುಂದೂಡಲಾಯಿತು.

## ಮಾಜಿ ಸೈನಿಕರ ಸಂಘದ ಚುನಾವಣೆಗೆ ದಿನ ನಿಗದಿ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಏ. 13 ರಂದು ಜಿಲ್ಲಾ ಮಾಜಿ ಸೈನಿಕರ ಸಂಘದ ಸಮನ್ವಯ ಸಮಿತಿಯ ನೂತನ ಆಡಳಿತ ಮಂಡಳಿಗೆ ಚುನಾವಣೆ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಎಂ. ವೆಂಕಟೇಶ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿ, ಡಿಸೆಂಬರ್‌ನಲ್ಲೇ ನಮ್ಮ ಅವಧಿ ಮುಗಿದಿದೆ. ಮುಂದಿನ ಅವಧಿಯ ಪದಾಧಿಕಾರಿಗಳ ಆಯ್ಕೆಗೆ ಅವಕಾಶ ಮಾಡಿಕೊಡುತ್ತಿದ್ದೇವೆ. ಆಡಳಿತ ಮಂಡಳಿಯ ಒಮ್ಮತದ ನಿರ್ಧಾರದಂತೆ ಏ. 13 ರಂದು ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆ ವರೆಗೆ ನಗರದ ಕುವೆಂಪು ನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಚುನಾವಣೆ ನಡೆಸಲಾಗುತ್ತಿದೆ ಎಂದರು.

ಮಾಜಿ ಸೈನಿಕರ ಸಮನ್ವಯ ಸಮಿತಿಯ ಸದಸ್ಯರೆಲ್ಲರೂ ಸಹಕರಿಸಿ ಚುನಾವಣೆಯಲ್ಲಿ ಪಾಲ್ಗೊಂಡು ಯಶಸ್ವಿಗೊಳಿಸಬೇಕು. ಚುನಾವಣಾ ನೋಟಿಸ್ ತಲುಪದೇ ಇರುವ ಸದಸ್ಯರೆಲ್ಲರಿಗೂ ಸಂಘದ ವಾಟ್ಸಾಪ್ ಗ್ರೂಪ್‌ನಲ್ಲಿ ಕಳುಹಿಸಿರುವ ಸಂದೇಶವೇ ಅಂತಿಮ ಎಂದರು. ಸಂಘದ ಉಪಾಧ್ಯಕ್ಷ ಗೋವಿಂದೇಗೌಡ, ಖಜಾಂಚಿ ಬಾಲಕೃಷ್ಣ, ಸಂಘಟನಾ ಕಾರ್ಯದರ್ಶಿ ಹೆಚ್.ಎಸ್. ರಮೇಶ್, ನಿರ್ದೇಶಕ ಮಂಜೇಗೌಡ, ನಿರ್ದೇಶಕ ಮಹೇಶ್ ಇದ್ದರು.

## ಅರಣ್ಯ ಇಲಾಖೆ ವಿರುದ್ಧ ಹೋರಾಟ ಅವಶ್ಯ



ಬೇಲೂರು: ಅರಣ್ಯ ಇಲಾಖೆ ರೈತರಿಗೆ ಒತ್ತುವರಿ ಹೆಸರಿನಲ್ಲಿ ಕಿರುಕುಳ ನೀಡುತ್ತಿದ್ದು ಅದರ ವಿರುದ್ಧ ಸಂಘಟಿತ ಹೋರಾಟದ ಅವಶ್ಯಕತೆಯಿದೆ ಎಂದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಹೆಚ್.ಆರ್. ನವೀನ್ ಕುಮಾರ್ ಹೇಳಿದರು.

ತಾಲ್ಲೂಕಿನ ಅಡವಿ ಬಂಟೇನ ಹಳ್ಳಿಯಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಸದಸ್ಯತ್ವ ಆಂದೋಲನ ಉದ್ಘಾಟಿಸಿ ಮಾತನಾಡಿ, ರೈತರು ಸಂಘಟಿತರಾಗದಿದ್ದರೆ ಭೂಮಿ ಉಳಿಸಿಕೊಳ್ಳಲು ಸಾಧ್ಯವಿಲ್ಲ, ಬೆಳೆದ ಬೆಳೆಗೆ ಉತ್ತಮ ಬೆಲೆಯೂ ಸಿಗುವುದಿಲ್ಲ ಎಂದು ತಿಳಿಸಿದರು.

ಪ್ರಸ್ತುತ ದಿನಗಳಲ್ಲಿ ಕೃಷಿ ಕ್ಷೇತ್ರ ಬಿಕ್ಕಟ್ಟಿಗೆ ಸಿಲುಕಿದೆ. ವ್ಯವಸಾಯವನ್ನೇ ನಂಬಿರುವ ರೈತ ಸಮುದಾಯ ಆದಾಯವಿಲ್ಲದೆ ಮಾಡಿದ ಸಾಲ ತೀರಿಸಲಾಗದೆ ಆತ್ಮಹತ್ಯೆ ಹಾದಿ ಹಿಡಿಯುವಂತಾಗಿದೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ರೈತರು ಪರಿಸ್ಥಿತಿಯನ್ನು ಎದುರಿಸಲು ಸಂಘಟಿತರಾಗಿ ಹೋರಾಟಕ್ಕಿಳಿಯಬೇಕು. ನೂರಾರು ವರ್ಷಗಳಿಂದ ವ್ಯವಸಾಯ ಮಾಡುತ್ತಾ ರೈತರು ದೇಶದ ಆಹಾರ ಭದ್ರತೆಗೆ ಕೊಡುಗೆ ನೀಡುತ್ತಿದ್ದಾರೆ. ಉಳುಮೆ ಮಾಡುತ್ತಿರುವ ಬಗರ್ ಹುಕುಂ ಸಾಗುವಳಿಯನ್ನು ಮಂಜೂರು ಮಾಡಲು ಸರ್ಕಾರ ಗಮನ ನೀಡುತ್ತಿಲ್ಲ. ಬದಲಾಗಿ ರೈತರಿಂದ ಭೂಮಿ ಕಿತ್ತುಕೊಂಡು ಬಂಡವಾಳ ಶಾಹಿಗಳಿಗೆ ಒಪ್ಪಿಸುತ್ತಿದೆ ಎಂದರು.

ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಿಂದ ರೈತರಿಗೆ ಕಿರುಕುಳ ನೀಡಿ, ಸಾಗುವಳಿ ಮಾಡುತ್ತಿರುವವರನ್ನು ಒಕ್ಕಲೆಬ್ಬಿಸಲು ಮುಂದಾಗುತ್ತಿರುವುದು ರೈತರನ್ನು ಮತ್ತಷ್ಟು ಸಂಕಷ್ಟಕ್ಕೆ ದೂಡಲಿದೆ ಎಂದರು.

# ಹಳದಿ ಕಲ್ಲಂಗಡಿ ಬೆಳೆದು ಯಶಸ್ಸು ಕಂಡ ಯುವ ರೈತ

## 4 ಎಕರೆ ಜಮೀನಿನಲ್ಲಿ ಬೆಳೆ ಇತರ ರೈತರಿಗೂ ಪ್ರೇರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಬೇಸಿಗೆಯ ಋತುಮಾನದಲ್ಲಿ ಬಹುಬೇಡಿಕೆಯ ಪದಾರ್ಥ ಎನಿಸಿಕೊಂಡಿರುವ ಹಳದಿ ಕಲ್ಲಂಗಡಿ ಮಾರುಕಟ್ಟೆಗೆ ಪ್ರವೇಶ ಪಡೆದಿದ್ದು ಚನ್ನರಾಯಪಟ್ಟಣ ತಾಲ್ಲೂಕು ಬೆಳಗುಲಿ ಗ್ರಾಮದ ರೈತ ನವೀನ್ ಅಧಿಕ ಆದಾಯದ ನಿರೀಕ್ಷೆಯಲ್ಲಿದ್ದಾರೆ.

4 ಎಕರೆ ಜಮೀನಿನಲ್ಲಿ ಹಳದಿ ಕಲ್ಲಂಗಡಿ ಬೆಳೆದಿದ್ದಾರೆ. ಮಾರುಕಟ್ಟೆಯಲ್ಲಿ ಕಲ್ಲಂಗಡಿ ಬೆಲೆ ಕೆ.ಜಿ.ಗೆ 70 ರಿಂದ 80 ರೂ. ತಲುಪಿದೆ. ಬಿಬಿಎಂ ವ್ಯಾಸಂಗ ಪೂರ್ಣಗೊಳಿಸಿರುವ ನವೀನ್ ಅವರು ಯಾವುದೇ ಉದ್ಯೋಗ ಮಾಡದೆ ಸಂಪೂರ್ಣ ಕೃಷಿಯಲ್ಲಿ ತೊಡಗಿದ್ದಾರೆ. ಅಧ್ಯಯನ ಹಾಗೂ ಸ್ನೇಹಿತರ ಮಾರ್ಗದರ್ಶನದಿಂದ ತಮ್ಮ 4 ಎಕರೆ ಜಮೀನಿನಲ್ಲಿ ಹಳದಿ ಕಲ್ಲಂಗಡಿಯನ್ನು 2020ರಿಂದ ಬೆಳೆಯುತ್ತಿದ್ದಾರೆ. ಮೂರು ತಿಂಗಳ ಬೆಳೆಯಾಗಿರುವ ಹಳದಿ ಕಲ್ಲಂಗಡಿ ಬೆಳೆಯಲು ಪ್ರತಿ ಎಕರೆಗೆ 1 ಲಕ್ಷ ರೂ. ಖರ್ಚಾಗುತ್ತದೆ. 25 ರಿಂದ 30 ಟನ್ ಕಲ್ಲಂಗಡಿ ಉತ್ಪಾದನೆ ಸಾಧ್ಯವಾಗಲಿದ್ದು, ಕೆ.ಜಿ.ಗೆ ಕನಿಷ್ಠ 18 ರಿಂದ 20 ರೂ. ದೊರೆತರೆ 2 ರಿಂದ 2.50 ಲಕ್ಷ ರೂ. ಆದಾಯ ಗಳಿಸಬಹುದು. ಕಳೆದ ನಾಲ್ಕು ವರ್ಷಗಳಿಂದ ಉತ್ತಮ ಬೆಲೆ ಸಿಕ್ಕಿದೆ.





### ಅಪಪ್ರಚಾರಕ್ಕೆ ಬೇಸರ

ಸಾಮಾಜಿಕ ಜಾಲತಾಣಗಳಲ್ಲಿ ಹರಡುತ್ತಿರುವ ತಪ್ಪು ಮಾಹಿತಿಯಿಂದಾಗಿ ಈ ವರ್ಷ ಬೆಲೆ ಕೆ.ಜಿ.ಗೆ 5 ರಿಂದ 6 ರೂ.ಗೆ ಇಳಿಕೆಯಾಗಿದ್ದು ಖರ್ಚು ಸರಿದೂಗುವ ಆತಂಕ ಕಾಡುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಹಳದಿ ಕಲ್ಲಂಗಡಿ ಕುರಿತು ಕೆಲವರು ಅಪಪ್ರಚಾರ ಮಾಡುತ್ತಿರುವುದೇ ಬೆಲೆ ಕುಸಿತಕ್ಕೆ ಕಾರಣ ಎಂದು ನವೀನ್ ಹೇಳುತ್ತಾರೆ. ಹಳದಿ ಕಲ್ಲಂಗಡಿಗೆ ಇಂಜೆಕ್ಷನ್ ಮಾಡುತ್ತಿದ್ದು ಯಾರೂ ಖರೀದಿಸಬಾರದು. ಹಣ್ಣು ಸೇವನೆಯಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ ಎಂದು ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಪೇಜ್‌ಗಳಲ್ಲಿ ಕೆಲವರು ಸುಳ್ಳು ಸಂದೇಶ ಹರಡುತ್ತಿರುವುದರಿಂದ ಬೆಳೆಗಾರರನ್ನು ಸಂಶಯದಿಂದ ನೋಡುವಂತಾಗಿದೆ. ಗ್ರಾಹಕರು ಅದನ್ನು ಗಂಭೀರವಾಗಿ ಪರಿಗಣಿಸಿರುವುದರಿಂದ ಬೇಡಿಕೆ ಕುಸಿದು ಬೆಲೆ ಇಳಿಕೆಯಾಗಿದೆ ಎಂದು ಅವರು ಹೇಳಿದರು.

### ಇಳುವರಿ ಕಡಿಮೆ

ಸಾಮಾನ್ಯವಾಗಿ ಹಾಸನ ಸೇರಿ ಸುತ್ತಲಿನ ಜಿಲ್ಲೆಗಳಲ್ಲಿ ಕೆಂಪು ಕಲ್ಲಂಗಡಿ ಹೆಚ್ಚಾಗಿ ಬೆಳಯುತ್ತಾರೆ ಹೊರತು ಹಳದಿ ಕಲ್ಲಂಗಡಿ ಬಗ್ಗೆ ರೈತರು ಆಸಕ್ತಿ ತೋರುತ್ತಿಲ್ಲ. ದೊಡ್ಡಬಳ್ಳಾಪುರ, ಕೋಲಾರ ಭಾಗದಲ್ಲಿ ಸ್ವಲ್ಪ ಬೆಳೆಯಿದೆ. ಇದಕ್ಕೆ ಸ್ಥಳೀಯವಾಗಿ ಮಾರುಕಟ್ಟೆಯೂ ಇಲ್ಲದಿರುವುದರಿಂದ ಸಮಸ್ಯೆಯಾಗಿದೆ. ಆದರೂ ಅಧಿಕ ಆದಾಯದ ಭರವಸೆಯಿಂದ ಹಲವು ರೈತರು ಹಳದಿ ಕಲ್ಲಂಗಡಿ ಬೆಳೆಯಲು ಮುಂದಾಗಿದ್ದಾರೆ. ಆದರೆ ಸಾಮಾಜಿಕ ಜಾಲತಾಣಗಳ ತಪ್ಪು ಸಂದೇಶವು ಆತಂಕ ಹುಟ್ಟಿಸುತ್ತಿದೆ.

### ಹಳದಿ ಕಲ್ಲಂಗಡಿ ಪ್ರಯೋಜನ

ಹಳದಿ ಕಲ್ಲಂಗಡಿ ಕೆಂಪು ಕಲ್ಲಂಗಡಿಗಿಂತ ಸಿಹಿಯಾಗಿರುತ್ತದೆ. ಪೊಟ್ಯಾಸಿಯಮ್ ಸೇರಿದಂತೆ ಹಲವು ಖನಿಜಾಂಶಗಳಿವೆ. ಇದು ದೇಹದಲ್ಲಿ ಲಿಕ್ವಿಡ್ ಲೆವೆಲ್ ಅನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಹೆಚ್ಚಿನ ನೀರಿನ ಅಂಶ ಹೊಂದಿರುವುದರಿಂದ ದೇಹದ ತೂಕ ಇಳಿಸಿಕೊಳ್ಳಲು ನೆರವಾಗುತ್ತದೆ.

# ಹಾಸ್ಟೆಲ್ ರಿಪೇರಿ ಕಾಮಗಾರಿಗೆ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**



ಅರಕಲಗೂಡು: ತಾಲ್ಲೂಕಿನ ದೇವರಾಜು ಅರಸು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿ ನಿಲಯಗಳ ದುರಸ್ತಿ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳನ್ನು 1.30 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿದೆ ಎಂದು ಶಾಸಕ ಎ. ಮಂಜು ತಿಳಿಸಿದರು.

ತಾಲ್ಲೂಕಿನ ಗಂಗೂರು, ದೊಡ್ಡಮಗ್ಗೆ ಹಾಗೂ ಬೈಚನಹಳ್ಳಿ ಗ್ರಾಮಗಳ ಬಿಸಿಎಂ ವಿದ್ಯಾರ್ಥಿ ನಿಲಯಗಳಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಬಡ, ಹಿಂದುಳಿದ ವರ್ಗಗಳ ಮಕ್ಕಳು ವಿದ್ಯಾರ್ಥಿ ನಿಲಯಗಳಲ್ಲಿದ್ದು, ಹೆಚ್ಚುವರಿ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುತ್ತಿದೆ. ಪೋಷಕರು ತಮ್ಮ ಮಕ್ಕಳನ್ನು ವಿದ್ಯಾರ್ಥಿ ನಿಲಯಗಳಿಗೆ ದಾಖಲಾತಿ ಮಾಡಿ ಉಚಿತವಾಗಿ ಸಿಗುವ ಸೌಕರ್ಯಗಳನ್ನು ಬಳಕೆ ಮಾಡಿಕೊಳ್ಳಬೇಕೆಂದು ಸಲಹೆ ನೀಡಿದರು.

ತಾಲ್ಲೂಕಿನ ಬೈಚನಹಳ್ಳಿ ಗ್ರಾಮದ ಬಿಸಿಎಂ ವಿದ್ಯಾರ್ಥಿ ನಿಲಯಕ್ಕೆ 20.65ಲಕ್ಷ ರೂ. ದೊಡ್ಡಮಗ್ಗೆ ಗ್ರಾಮದ ನಿಲಯಕ್ಕೆ 19.90 ಲಕ್ಷ ರೂ. ಹಾಗೂ ಗಂಗೂರು ಗ್ರಾಮದ ವಿದ್ಯಾರ್ಥಿ ನಿಲಯದ ಊಟದ ಹಾಲ್ ನಿರ್ಮಾಣ 29.30 ಲಕ್ಷ ರೂ. ವೆಚ್ಚದಲ್ಲಿ ನೂತನ ಕಾಮಗಾರಿಗಳು ನಡೆಯಲಿವೆ. ಬಡಮಕ್ಕಳೇ ಇರುವುದರಿಂದ ಗುಣಮಟ್ಟದಿಂದ ಕೆಲಸಗಳು ನಡೆಯಬೇಕು. ಕೇವಲ ಇಲಾಖೆ ಅಧಿಕಾರಿಗಳು ಕಾಮಗಾರಿ ವೀಕ್ಷಣೆ ಮಾಡದೇ ಸ್ಥಳೀಯ ಗ್ರಾಪಂ ಆಡಳಿತ ಮತ್ತು ಆಯಾ ಊರುಗಳ ಮುಖಂಡರುಗಳು ಕೂಡ ಕೆಲಸ ವೀಕ್ಷಣೆ ಮಾಡಿ ಗುಣಮಟ್ಟದಿಂದ ನಿರ್ವಹಣೆ ಮಾಡಿಸಿಕೊಳ್ಳುವ ನಿಟ್ಟಿನಲ್ಲಿ ಎಚ್ಚರಿಕೆ ವಹಿಸಬೇಕೆಂದು ಅವರು ಮನವಿ ಮಾಡಿದರು.

ದೊಡ್ಡಮಗ್ಗೆ ರಾಜೇಗೌಡ, ಗ್ರಾಪಂ ಅಧ್ಯಕ್ಷ ಅಶೋಕ್, ಮುಖಂಡರಾದ ಮಂಜುನಾಥ್, ರಘು ಇತರರಿದ್ದರು.

# 8.23 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

ಹಾಸನ: ಮನೆಯಲ್ಲಿ ಯಾರೂ ಇಲ್ಲದಿರುವುದನ್ನು ಖಚಿತಪಡಿಸಿಕೊಂಡು ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ನಗದು ಸೇರಿ 8.23 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ರಾಜಾಜಿನಗರದಲ್ಲಿ ನಡೆದಿದೆ.

ಪ್ರಶಾಂತ್ ಅವರು ಕುಟುಂಬ ಸಮೇತ ಮಾ. 22 ರಂದು ಬಾಳ್ಳುಪೇಟೆಗೆ ತೆರಳಿದ್ದರು.

ಮಾರನೇ ದಿನ ಬಂದು ನೋಡಿದಾಗ ಕಳ್ಳತನವಾಗಿರುವುದು ತಿಳಿದಿದೆ. ಬಲವಾದ ಆಯುಧದಿಂದ ಬಾಗಿಲು ಮುರಿದಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 20 ಗ್ರಾಂ ತೂಕದ ಒಂದು ಜೊತೆ ಚಿನ್ನದ ಬಳೆ, 15 ಗ್ರಾಂನ ಚಿನ್ನದ ಬಳೆ, 12 ಗ್ರಾಂ ತೂಕದ ಒಂದು ಚಿನ್ನದ ಬಳೆ,

18 ಗ್ರಾಂ ತೂಕದ ಚಿನ್ನದ ಕರಿಮಣಿ ಸರ, 16 ಗ್ರಾಂ ತೂಕದ 5 ಚಿನ್ನದ ಉಂಗುರ ಸೇರಿಇದಂತೆ 8.23 ರೂ. ಮೌಲ್ಯದ ಚಿನ್ನಾಭರಣ ಕಳವು ಆಗಿದೆ.

# ಶಾಸಕ ಸುರೇಶ್ ಬೆಂಬಲಿಗರಿಂದ ದಲಿತ ಅಧಿಕಾರಿ ಮೇಲೆ ಹಲ್ಲೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ಜಿಲ್ಲಾ ಪಂಚಾಯಿತಿ ಗ್ರಾಮೀಣ ಕುಡಿಯುವ ನೀರು ವಿಭಾಗದ ಲೆಕ್ಕ ಪರಿಶೋಧನಾಧಿಕಾರಿ ಬಿ.ಸಿ. ರಾಮಚಂದ್ರು ಅವರ ಮೇಲೆ ಬೇಲೂರು ಶಾಸಕ ಹೆಚ್.ಕೆ. ಸುರೇಶ್ ಅವರ ಆಪ್ತ ಸಹಾಯಕ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿದ್ದಾರೆ ಎಂದು ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಮಾಜಿ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಮಗಾರಿಯ ಬಿಲ್ ಮಂಜೂರು ಮಾಡುವಂತೆ ಶಾಸಕರ ಆಪ್ತ ಸಹಾಯಕ



ವಿನಯ್ ಇತ್ತೀಚೆಗೆ ಕಚೇರಿಗೆ ನುಗ್ಗಿ ಹಲ್ಲೆ ನಡೆಸಿ ಜಾತಿ ನಿಂದನೆ ಮಾಡಿದ್ದಾರೆ. ಮಾನಸಿಕ ಹಾಗೂ ದೈಹಿಕವಾಗಿ ಹಿಂಸೆ ತಾಳಲಾರದೆ ರಾಮಚಂದ್ರು ಮಾನಸಿಕವಾಗಿ ಕುಗ್ಗಿದ್ದಾರೆ. ಜಿಲ್ಲೆಯಲ್ಲಿರುವ ಬೆರಳೆಣಿಕೆಯಷ್ಟು ದಲಿತ ಅಧಿಕಾರಿಗಳನ್ನು ಸಹಿಸಲು ಆಗುತ್ತಿಲ್ಲ ಎಂದರು.

ಸ್ಪರ್ಧಾತ್ಮಕ ಜಗತ್ತಿನಲ್ಲಿ ಸರ್ಕಾರಿ ನೌಕರಿ ಪಡೆಯುವುದು ಕಷ್ಟದ ಕೆಲಸ. ಅದರಲ್ಲೂ ಹಿಂದುಳಿದ ಸಮುದಾಯದವರು ಉದ್ಯೋಗ ಗಿಟ್ಟಿಸಿಕೊಂಡಿದ್ದಾರೆ. ಅವರಿಗೆ ಕೆಲಸ ಮಾಡಲು ರಾಜಕಾರಣಿಗಳು ಬಿಡುತ್ತಿಲ್ಲ. ಅಧಿಕಾರಕ್ಕೆ ಬಂದಾಗಿನಿಂದಲೂ ಶಾಸಕ ಹೆಚ್.ಕೆ. ಸುರೇಶ್ ಭ್ರಷ್ಟಾಚಾರ ಮುಕ್ತ ತಾಲ್ಲೂಕು ಮಾಡುತ್ತೇನೆಂದು ಹೇಳುತ್ತಾರೆ. ಆ ನಿಟ್ಟಿನಲ್ಲಿ ಯಾವ ಕೆಲಸವನ್ನು ಮಾಡುತ್ತಿಲ್ಲ. ದಲಿತ ಅಧಿಕಾರಿಗಳ ಮೇಲೆ ದಬ್ಬಾಳಿಕೆ ನಡೆಸುವುದೇ ಅವರ ಕೆಲಸವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲೆಯಲ್ಲಿ ಪೊಲೀಸ್ ಇಲಾಖೆ ಸಂಪೂರ್ಣ ನಿಷ್ಕ್ರಿಯವಾಗಿದೆ. ರಾಮಚಂದ್ರು ಅವರು ಶಾಸಕರ ಪಿಎ ಹಾಗು ಜಿಲ್ಲಾ ಪಂಚಾಯಿತಿ ಕಾರ್ಯಪಾಲಕ ಇಂಜಿನೀಯರ್ ವಿರುದ್ಧ ಎಫ್‌ಐಆರ್ ದಾಖಲಿಸಿದ್ದರೂ ಕ್ರಮ ಜರುಗಿಸಿಲ್ಲ. ಇದೇ ರೀತಿ ನಿರ್ಲಕ್ಷ್ಯ ಮುಂದುವರೆದರೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದರು.


# ದೆಹಲಿ ಕರ್ನಾಟಕ ಸಂಘದಲ್ಲಿ ಅರಳಿದ ಹಾಸನದ ರಂಗ ಪ್ರತಿಭೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹಾಸನ: ದೆಹಲಿಯ ಕರ್ನಾಟಕ ಸಂಘದ ಸಭಾಂಗಣದಲ್ಲಿ ಹಾಸನದ ರಂಗ ಪ್ರತಿಭೆ, ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ ಪುರಸ್ಕೃತೆ ಪೂಜಾ ರಘುನಂದನ್ ಅಭಿನಯದ ತಾಯಿಯಾಗುವುದೆಂದರೆ ಏಕವ್ಯಕ್ತಿ ರಂಗಪ್ರಯೋಗದ 30ನೇ ಆವೃತ್ತಿ ಯಶಸ್ವಿಯಾಗಿ ಪ್ರದರ್ಶನಗೊಂಡಿತು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಸುಧಾಮೂರ್ತಿಯವರು ದೆಹಲಿಯ ವನಿತೆಯರೊಂದಿಗೆ ಸುಮಾರು ಒಂದು ಗಂಟೆಗೂ ಅಧಿಕ ಕಾಲ ನಾಡು, ನುಡಿ, ಸಂಸ್ಕೃತಿ ಮತ್ತು ಮಹಿಳೆಯರ ಕುರಿತಾಗಿ ಆಪ್ತ ಸಂವಾದದಲ್ಲಿ ಭಾಗಿಯಾದರು. ಎಲ್ಲರೊಂದಿಗೂ ಆತ್ಮೀಯ ಮಾತುಕತೆ ನಡೆಸಿದ ಸುಧಾಮೂರ್ತಿಯವರ ಸರಳತೆಯನ್ನು ಸಭಿಕರು ಮೆಚ್ಚಿಕೊಂಡರು. ಇದೇ ವೇಳೆ ಹೊರನಾಡ ಕನ್ನಡತಿಯರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

ನಂತರ ಪೂಜಾ ರಘುನಂದನ್ ಅಭಿನಯದ ತಾಯಿಯಾಗುವುದೆಂದರೆಟಟ ಏಕವ್ಯಕ್ತಿ ರಂಗ ಪ್ರಯೋಗ




ನಡೆಯಿತು. ನಾಟಕವನ್ನು ಸಂಪೂರ್ಣವಾಗಿ ವೀಕ್ಷಿಸಿದ ಸುಧಾಮೂರ್ತಿ, ಅಭಿನಯವನ್ನು ಬಹುವಾಗಿ ಮೆಚ್ಚಿಕೊಂಡರಲ್ಲದೆ ಕಲಾವಿದೆ ಪೂಜಾ ರಘುನಂದನ್ ಅವರನ್ನು ಸನ್ಮಾನಿಸಿ ಗೌರವಿಸಿದರು.

ಇದೆ ವೇಳೆ ನಾಟಕದ ಕುರಿತಾಗಿ ಅನೇಕರು ಮಾತನಾಡಿ, ಸಮಾಜಕ್ಕೆ ಸಂದೇಶ ನೀಡುವಂತಹ ಇಂತಹ ನಾಟಕಗಳು ಹೆಚ್ಚು ಪ್ರದರ್ಶನಗೊಳ್ಳಲಿ ಎಂದು ಆಶಿಸಿದರು. ಮತ್ತೊಮ್ಮೆ ದೆಹಲಿಯಲ್ಲಿ ತಾಯಿಯಾಗುವುದೆಂದರೆ ಏಕವ್ಯಕ್ತಿ ರಂಗ ಪ್ರಯೋಗವನ್ನು ಆಯೋಜಿಸುವುದಾಗಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ್ ತಿಳಿಸಿದರು. ಕೃಷ್ಣಮೂರ್ತಿ ಕವತ್ತಾರ್ ನಿರ್ದೇಶನ, ಹರಿಗೆ ಗೋಪಾಲಸ್ವಾಮಿ ಅವರ ಬೆಳಕು ನಿರ್ವಹಣೆಯನ್ನೂ ಮತ್ತು ಹಾಸನದ ರಂಗಹೃದಯ ಕಲಾತಂಡವನ್ನೂ ದೆಹಲಿಯ ಕನ್ನಡಿಗರು ಮನತುಂಬಿ ಶ್ಲಾಘಿಸಿದರು.

ಕಾರ್ಯಕ್ರಮಕ್ಕೂ ಮೊದಲು ಕರ್ನಾಟಕ ಸಂಘದ ಭವನದಲ್ಲಿ ರಾಜ್ಯಸಭಾ ಸದಸ್ಯೆ ಡಾ. ಸುಧಾಮೂರ್ತಿ ಅನುದಾನದಲ್ಲಿ ನಿರ್ಮಾಣವಾಗಿರುವ ಲಿಫ್ಟ್ ಗೆ ಚಾಲನೆ ನೀಡಲಾಯಿತು. ಇದರ ಜೊತೆಗೆ ನೆಲಮಾಳಿಗೆಯಲ್ಲಿ ಕನ್ನಡ ಗ್ರಂಥಾಲಯವನ್ನೂ ಲೋಕಾರ್ಪಣೆಗೊಳಿಸಲಾಯಿತು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ, ಜಂಟಿ ಕಾರ್ಯದರ್ಶಿ ಅಶ್ವಿನಿ, ಖಜಾಂಚಿ ಆಶಾಲತಾ, ಸಂಘದ ಸದಸ್ಯ ಹಾಗೂ ಸುಧಾಮೂರ್ತಿ ಅವರ ಆಪ್ತ ಸಹಾಯಕ ಅರುಣ್, ಶುಭಾದೇವಿ ಪ್ರಸಾದ್, ಜಯಶ್ರೀ, ಮಾಲಿನಿ ಪ್ರಹ್ಲಾದ್, ಕಲಾವಿದೆ ಸವಿತಾ ಇನಾಮದಾರ್ ಇತರರಿದ್ದರು.

# ಕ್ರೈಸ್ತ ಧರ್ಮದ ಬಗ್ಗೆ ಅಪಪ್ರಚಾರ: ಆರೋಪ




ಹಾಸನ: ನಗರದ ಎನ್.ಆರ್. ವೃತ್ತದಲ್ಲಿರುವ ಚರ್ಚ್‌ನಲ್ಲಿ ಬಲವಂತದ ಮತಾಂತರ ನಡೆಯುತ್ತಿದೆ ಎಂಬ ಆರೋಪ ಸತ್ಯಕ್ಕೆ ದೂರವಾದುದು ಎಂದು ಸಂತ ಅಂತೋಣಿ ದೇವಾಲಯ ಆಡಳಿತ ಮಂಡಳಿ ಪದಾಧಿಕಾರಿ ಪ್ರಶಾಂತ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲಕ್ಷ್ಮೀ ಎಂಬ ಮಹಿಳೆಯೊಬ್ಬರು ಕಳೆದ ಒಂದು ವರ್ಷದಿಂದ ಈ ರೀತಿ ಸುಳ್ಳು ಹೇಳುತ್ತಾ ತಿರುಗುತ್ತಿದ್ದಾರೆ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರಿಗೆ ದೂರು ಸಹ ನೀಡಿದ್ದಾರೆ. ಈ ಮಹಿಳೆ ಯಾರೆಂಬುದು ನಮಗೆ ಗೊತ್ತಿಲ್ಲ. ಮಾನಸಿಕ ಅಸ್ವಸ್ಥರಂತೆ ವರ್ತಿಸುತ್ತಾರೆ. ಬಲವಂತವಾಗಿ ಕ್ರೈಸ್ತ ಧರ್ಮಕ್ಕೆ ಮತಾಂತರ ಮಾಡಲಾಗುತ್ತಿದೆ ಎಂಬ ಆಧಾರ ರಹಿತ ಆರೋಪ ಮಾಡುತ್ತಿದ್ದಾರೆ ಎಂದು ದೂರಿದರು.

ಆ ಮಹಿಳೆ ಸ್ವತಃ ಮತಾಂತರಕ್ಕೆ ಒಳಪಟ್ಟಿರುವುದಾಗಿ ಸುಳ್ಳು ಹೇಳುತ್ತಿದ್ದಾರೆ. ನಮ್ಮ ಧರ್ಮ ಕೇಂದ್ರದ ಕಚೇರಿಯಲ್ಲಿ ಸದಸ್ಯರ ಸಂಪೂರ್ಣ ಮಾಹಿತಿಯೊಂದಿಗೆ ಕೈಪಿಡಿಯನ್ನು ಎಲ್ಲರಿಗೂ ನೀಡಲಾಗುತ್ತದೆ. ಅಂತಹ ಯಾವ ದಾಖಲೆಯೂ ಅವರ ಬಳಿಯಿಲ್ಲ ಎಂದರು.

ಈ ಮಹಿಳೆಗೆ ಸುಳ್ಳು ಮಾಹಿತಿ ನೀಡಿ ಮತಾಂತರ ಕುರಿತು ಪ್ರಚೋದಿಸಲಾಗುತ್ತಿದೆ ಎಂಬ ಅನುಮಾನ ಮೂಡಿದೆ. ಪೊಲೀಸ್ ಠಾಣೆಗೂ ಈ ಬಗ್ಗೆ ದೂರು ನೀಡಿ ಸತ್ಯಾಸತ್ಯತೆ ಬಯಲಿಗೆಳೆಯಬೇಕು ಎಂದು ಒತ್ತಾಯಿಸಿದರು.

ಸಂತ ಅಂತೋಣಿ ದೇವಾಲಯ ಆಡಳಿತ ಮಂಡಳಿಯ ಫಾ. ಡಿಸೋಜಾ, ಆರೋಕಿಯಪ್ಪ, ಫಾ. ಅವಿನ್, ಹ್ಯೂಬರ್ಟ್ ಇದ್ದರು.

# ವಿದ್ಯಾರ್ಥಿಗಳು ಇತಿಹಾಸ ಜ್ಞಾನ ಹೊಂದಬೇಕು

ಚನ್ನರಾಯಪಟ್ಟಣ: ಪ್ರಾಚೀನ ದೇವಾಲಯಗಳ ವೀಕ್ಷಣೆ ಹಾಗೂ ಅಧ್ಯಯನದಿಂದ ದೇಶದ ಇತಿಹಾಸವನ್ನು ಅರಿಯಬಹುದು ಎಂದು ಆದಿಚುಂಚನಗಿರಿ ಪದವಿ ಕಾಲೇಜು ಪ್ರಾಂಶುಪಾಲ ಡಾ. ಎಂ.ಕೆ. ಮಂಜುನಾಥ್ ತಿಳಿಸಿದರು.

ಕಾಲೇಜಿನಲ್ಲಿ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕದಿಂದ ಸೋಮವಾರ ಆಯೋಜಿಸಿದ್ದ ದೇವಾಲಯಗಳ ಇತಿಹಾಸ-ಪರಿಚಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಶಿಲಾಶಾಸನಗಳ ಸಂರಕ್ಷಣೆ ಹಾಗು ಆಳ ಸಂಶೋಧನೆಗಳಾಗಬೇಕು. ಶಾಸನಗಳೇ ದಾಖಲೆಗಳಾಗಿದ್ದು, ಹೊಯ್ಸಳ ಲಾಂಛನದ ಸೂಕ್ಷ್ಮತೆ ಅರಿತು ಸಂಶೋಧನೆ ನಡೆಯಬೇಕಿದೆ ಎಂದರು.





ಸ್ಕೌಟ್ಸ್ ಅಂಡ್ ಗೈಡ್ಸ್ ತಾಲ್ಲೂಕು ಖಜಾಂಚಿ ಎ.ಎಂ. ಜಯರಾಮ್ ಮಾತನಾಡಿ, ರಾಜ್ಯದಲ್ಲೇ ಅತಿ ಹೆಚ್ಚು ದೇವಾಲಯ ಹೊಂದಿರುವ ತಾಲ್ಲೂಕು ಎಂಬ ಹಿರಿಮೆ ಚನ್ನರಾಯಪಟ್ಟಣಕ್ಕಿದೆ. ಚನ್ನಕೇಶವ ದೇವಾಲಯದಿಂದ ಚನ್ನರಾಯಪಟ್ಟಣ ಎಂಬ ಹೆಸರು ಬಂದಿದೆ. ಚಂದ್ರಮೌಳೇಶ್ವರ ದೇವಾಲಯ, ಗ್ರಾಮ ದೇವತೆ ಒಳಗೇರಮ್ಮ, ಕೊಳದ ಆಂಜನೇಯ, ಪಟ್ಟಣದ ಅಮಾನಿಕೆರೆ, ಶ್ರವಣಬೆಳಗೊಳದ ಚಿಕ್ಕಬೆಟ್ಟದ ಶಿಲಾ ಶಾಸನ ತಾಲ್ಲೂಕಿನ ಅಮೂಲ್ಯ ಸಂಪತ್ತಾಗಿದೆ. ದೇವಾಲಯಗಳು ಸಾಂಸ್ಕೃತಿಕ ಕೇಂದ್ರದ ಜೊತೆಗೆ ಭಾವೈಕ್ಯತೆಯ ಸಂಕೇತವು ಆಗಿವೆ ಎಂದರು.

ರೋವರ್ ನಾಯಕ ಪ್ರವೀಣ್, ರೇಂಜರ್ಸ್ ನಾಯಕ ನಿರುಷ ಮಾತನಾಡಿದರು. ಗವರ್ನರ್ ಪುರಸ್ಕಾರಕ್ಕೆ ಭಾಜನರಾದ ಸ್ವಾತಿ, ಸಂದೀಪ್, ಹರ್ಷಿತ, ಯಶವಂತ್, ಹರೀಶ್, ರಾಕೇಶ್ ಅವರನ್ನು ಅಭಿನಂದಿಸಲಾಯಿತು.

# ಇಮ್ಮಡಿ ಪುಲಕೇಶಿ ಚರಿತ್ರೆ ಹೇಳುವ ವಾತಾಪಿ

**- ರಜನೀಶ ಸಾಗರ**

ಪುಸ್ತಕ ವಿಮರ್ಶೆ




ಅವನು ಈ ಭೂಭಾಗ ಕಂಡ ಅಪ್ರತಿಮ ಯುದ್ಧಾಳು. ನೌಕಾ ಸೇನೆಯನ್ನು ಯಶಸ್ವಿಯಾಗಿ ಮುನ್ನಡೆಸಿ ವಿದೇಶಿ ಆಕ್ರಮಣವನ್ನು ಗೆದ್ದ ಹಿರಿಮೆ ಅವನದು. ವಿದೇಶಿ ಯಾತ್ರಾರ್ಥಿಗಳು ಮತ್ತು ಸಾಮ್ರಾಟರ ದೂತರು ಅವನ ಸ್ನೇಹಕ್ಕಾಗಿ ಆಗಮಿಸಿದ್ದರು. ಸಂಪೂರ್ಣ ದಕ್ಷಿಣವನ್ನೆಲ್ಲ ಗೆದ್ದ ಮತ್ತು ದಕ್ಷಿಣ ಪಥೇಶ್ವರನೆಂದು ಬಿರುದಾಂಕಿತನಾದ ಮೊಟ್ಟಮೊದಲ ಮತ್ತು ಕೊನೆಯ ಮಹಾಸೇನಾನಿ. ಅವನು ಗೆದ್ದ ಯುದ್ಧಗಳು ಕೇವಲ ರಣಾಂಗಣ ಸಾಹಸವಲ್ಲ, ದಾಖಲಿಸಬಲ್ಲ ಚರಿತ್ರೆಯಾಗಬೇಕಾದ ಅತಿ ದೊಡ್ಡ ದಂಡಯಾತ್ರೆಗಳು. ಪೂರ್ತಿ ಭರತ ಖಂಡದಲ್ಲೇ ಅವನಂಥ ಅಪ್ರತಿಮ ನೇರ ಯುದ್ಧ ರಂಗಕ್ಕಿಳಿದು ಗೆಲ್ಲುತ್ತಿದ್ದ ಸೇನಾನಿ ಬರಲೇ ಇಲ್ಲ. ಅಖಂಡ ಎರಡು ದಶಕಗಳ ಕಾಲ ಸಂಪೂರ್ಣ ದಕ್ಷಿಣ ಭಾರತವನ್ನು ಆಳಿದ್ದಲ್ಲದೇ, ಜಗತ್ತಿನ ಮೊದಲ ಐದು ಮಹಾ ಯುದ್ಧದಲ್ಲಿ ಒಂದಾದ ರೇವಾ ನದಿ ತೀರದ ಯುದ್ಧವನ್ನು ಗೆದ್ದ ದಾಖಲೆ ಅವನೊಬ್ಬನದ್ದೇ. ಶಿಲ್ಪಕಲೆ ಲಲಿತ ಕಲೆ ಮತ್ತು ಗುರುಕುಲಗಳಿಗೆ ನ್ಯಾಯ ಒದಗಿಸಿದ. ಎದುರಾಳಿಗಳೇ ಇಲ್ಲದಂತೆ ಜನಾನುರಾಗಿ ಆಡಳಿತ ನಡೆಸಿದ, ಅವನಿಗೆ ಮುಳುವಾಗಿದ್ದು ಅವನ ಒಳ್ಳೆಯತನಗಳೇ. ಅವನೇ ಚಾಲುಕ್ಯರ ಅಪ್ರತಿಮ ಸೇನಾನಿ ಇಮ್ಮಡಿ ಪುಲಕೇಶಿ. ಇಮ್ಮಡಿ ಪುಲಕೇಶಿ ಖಡಾ ಖಂಡಿತ ಯುದ್ಧ ರಕ್ತಪಾತಗಳನ್ನು ಮಾಡಿದ ವೀರ ನಿರ್ದಯವಾಗಿ ಶತ್ರುಗಳನ್ನು ತೆರೆದು ಪುಲಕೇಶಿ ಪರಮೇಶ್ವರನಾದ. ಅವನ ದೊಡ್ಡ ವಿಜಯ ಹರ್ಷನ ಮೇಲೂ, ಅದಕ್ಕೂ ಮೊದಲು ಪಲ್ಲವರ ಮೇಲು ಆಗಿದ್ದು ಹೌದಾದರೂ, ಆತನ ದೊಡ್ಡ ದಂಡಯಾತ್ರೆಯ ವಿವರ ನಮಗೆ ಲಭ್ಯವಾಗುವುದಿಲ್ಲ. ಆತನ ದೀರ್ಘಕಾಲದ ಯುದ್ಧ ನಡೆದದ್ದು ಲಾಟರು ಮತ್ತು ಮಾಳವರನ್ನು ತಲುಪಿದಾಗ. ಆ ಕಾರಣಕ್ಕಾಗಿ ಅವನು ಸಾಮ್ರಾಟನಾದವನೇ, ಹೊರತು ಸುಮ್ಮನೆ ಸಾಮಂತರನ್ನು ಗೆದ್ದದ್ದಕ್ಕಾಗಿ ಅಲ್ಲ. ಭಾರತದಲ್ಲಿದ್ದವರಿಗೆ ಕರ್ನಾಟಕ ಬಲದ ಸೈನ್ಯದ ರುಚಿ ತೋರಿಸಿದ್ದನ್ನು, ಅತಿ ದೊಡ್ಡ ನೌಕಾಪಡೆ ಕಟ್ಟಿದ ಸಾಮ್ರಾಟ ಇಮ್ಮಡಿ ಪುಲಕೇಶಿ.

ಕನ್ನಡ ನಾಡಿನ ಹೆಮ್ಮೆಯ ಪುತ್ರ ಇಮ್ಮಡಿ ಪುಲಕೇಶಿಯ ಕುರಿತಾಗಿ ವಿದೇಶಿ ದಾಖಲೆ, ಸುಮಾರು ನೂರಕ್ಕೂ ಹೆಚ್ಚು ಶಾಸನಗಳು, ಮತ್ತು ತಾಮ್ರ ಪತ್ರಗಳು ಮತ್ತು ಇತರ ಸಾಹಿತ್ಯ ದಾಖಲೆಗಳಲ್ಲಿ ಲಭ್ಯವಿರುವ ಬಿಂದುಗಳನ್ನು ಸೇರಿಸಿ ಕನ್ನಡ ಓದುಗರಿಗೆ ಈ ಕೃತಿಯನ್ನು ಓದಲಿಕ್ಕೆ ಅನುವು ಮಾಡಿಕೊಟ್ಟವರು ಸಂತೋಷಕುಮಾರ್ ಮೆಹೆಂದಳೆ. ಅವರ ಅಪಾರ ಶ್ರಮ ಈ ಕೃತಿಯನ್ನು ಓದಿದಾಗ ಅರಿವಿಗೆ ಬರುವುದು. ಈ ಕೃತಿಯನ್ನು ರಚಿಸಲು ನಾಲ್ಕು ವರ್ಷಗಳ ಕಾಲ ಅಧ್ಯಯನ ಮಾಡಿರುವುದನ್ನು ಕೂಡ ನಾವು ಗಮನಿಸಬಹುದು. 400 ಪುಟಗಳ ಈ ಕೃತಿಯ ಬೆಲೆ 449 ರೂ. ಗಳಾಗಿರುತ್ತದೆ. ಇದನ್ನು ಟಸಾಹಿತ್ಯ ಲೋಕ ಪಬ್ಲಿಕೇಶನ್ಸ್, ಬೆಂಗಳೂರು ಇವರು ಪ್ರಕಟಿಸಿದ್ದಾರೆ. ಈ ಕೃತಿ ಸಾಗರದ ರವೀಂದ್ರ ಪುಸ್ತಕಾಲಯದಲ್ಲಿ ರಿಯಾಯಿತಿ ದರದಲ್ಲಿ ಲಭ್ಯವಿರುತ್ತದೆ.

# ಅಂಗವೈಕಲ್ಯ ಶಾಪವಲ್ಲ



**ಕನ್ನಡ ಪೋಸ್ಟ್ ನ್ಯೂಸ್ ನೆಟ್‌ವರ್ಕ್**

ಹೊಳೆನರಸೀಪುರ: ಅಂಗವೈಕಲ್ಯ ಶಾಪವಲ್ಲ ಆ ರೀತಿ ಭಾವಿಸದೆ ಸಮಸ್ಯೆಗಳನ್ನು ಎದುರಿಸುವ ಕೌಶಲ ಕರಗತ ಮಾಡಿಕೊಳ್ಳಬೇಕು ಎಂದು ವಾಸವಿ ಕ್ಲಬ್ ಅಧ್ಯಕ್ಷೆ ಎನ್. ಹೇಮಾ ಹೇಳಿದರು.

ಪಟ್ಟಣದ ಶ್ರೀ ಕನ್ನಿಕಾಪರಮೇಶ್ವರಿ ದೇವಾಲಯದಲ್ಲಿ ವಾಸವಿ ಕ್ಲಬ್, ಓಮೆಗಾ ರೀಹ್ಯಾಬ್ ಫೆಡರೇಷನ್ ಸಹಯೋಗದೊಂದಿಗೆ ಆಯೋಜಿಸಿದ್ದ ಕೃತಕ ಕೈಕಾಲು, ಶ್ರವಣ ಸಾಧನ ಹಾಗೂ ವ್ಹೀಲ್‌ಚೇರ್‌ಗಳ ಉಚಿತ ವಿತರಣಾ ಕಾರ್ಯಕ್ರಮದಲ್ಲಿ ಮಾತನಾಡಿದರು.

ಆತ್ಮ ಸದೃಢತೆಯಿದ್ದರೆ ಎಲ್ಲ ವೈಕಲ್ಯತೆಯ ನಡುವೆಯೂ ಸಾಧನೆ ಮಾಡಬಹುದು. ಮನಸ್ಸಿನ ಅತೀಂದ್ರಿಯ ಶಕ್ತಿ ಎಲ್ಲಕ್ಕಿಂತ ಮಿಗಿಲು ಎಂದರು.

ಹಿರಿಯೂರಿನ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಅಧ್ಯಕ್ಷ ಎಚ್.ಎಸ್. ಸುಂದರ್‌ರಾಜ್ ಮಾತನಾಡಿ, ಸಂಘ, ಸಂಸ್ಥೆಗಳು ಸಮಾಜಿಕ ಉನ್ನತೀಕರಣಕ್ಕಾಗಿ ಸದಾ ಶ್ರಮಿಸಬೇಕಿದೆ. ಆಗ ಮಾತ್ರ ಸಹಕಾರ ಮತ್ತು ಸಮಾಜಿಕ ಭಾಂಧವ್ಯ ವೃದ್ಧಿಸುತ್ತದೆ ಎಂದರು.

ಅಪಘಾತ, ದುರ್ಘಟನೆಗಳಲ್ಲಿ ಕೈ, ಕಾಲು ಕಳೆದುಕೊಂಡ , ಶ್ರವಣದೋಷ ಇದ್ದ 25 ಕ್ಕೂ ಹೆಚ್ಚಿನರು ಶಿಬಿರದ ಪ್ರಯೋಜನ ಪಡೆದುಕೊಂಡರು.

ಹಿರಿಯೂರು ಆರ್ಯವೈಶ್ಯಮಂಡಳಿ ಅಧ್ಯಕ್ಷ ಎಚ್.ಎನ್.ನಾಗರಾಜ್ ಗುಪ್ತ, ಓಮೆಗಾ ರೀಹ್ಯಾಬ್‌ನ ಎಸ್ .ದಿನೇಶ್‌ಕುಮಾರ್, ವಾಸವಿಕ್ಲಬ್ ಕಾರ್ಯದರ್ಶಿ ದೀಪಾಬಾಲಾಜಿ, ತಾಪಂಯ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತ ಕೆ.ಬಿ.ಹರೀಶ್, ವಾಸವಿಯನ್ ಎಸ್.ರೋಹಿತ್ , ಖಜಾಂಚಿ ಲಕ್ಷ್ಮಿ ಗುಪ್ತ, ಗೋಕುಲ್ ಹಾಗೂ ಮುರಳಿ ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ತಂತ್ರಜ್ಞಾನದ ಅರಿವು ಇರಲಿ




ಹಾಸನ: ವಿದ್ಯಾರ್ಥಿಗಳು ಡಿಜಿಟಲ್ ತಂತ್ರಜ್ಞಾನದ ಅರಿವು ಪಡೆದು ಜ್ಞಾನ ವೃದ್ಧಿಸಿಕೊಳ್ಳಬೇಕು ಎಂದು ಸರ್ಕಾರಿ ಗೃಹ ವಿಜ್ಞಾನ ಕಾಲೇಜಿನ ಹಿರಿಯ ಗ್ರಂಥಪಾಲಕ ಡಾ. ಬಿ.ಜಿ. ನಾಗರಾಜ್ ಸಲಹೆ ನೀಡಿದರು.

ನಗರದ ಎಂ.ಜಿ. ರಸ್ತೆಯಲ್ಲಿನ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ, ಗಣಕ ವಿಜ್ಞಾನ ವಿಭಾಗ ಹಾಗೂ ಐಕ್ಯೂಎಸಿ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಆಧುನಿಕ ತಂತ್ರಜ್ಞಾನದ ಬಳಕೆ ಹಾಗು ಎಲೆಕ್ಟ್ರಾನಿಕ್ ಇ-ಬುಕ್ಸ್ ಮತ್ತು ಇ-ಜರ್ನಲ್ಸ್‌ಗಳ ಬಗ್ಗೆ ಮಾಹಿತಿ ನೀಡಿದರು.

ಪ್ರಾಂಶುಪಾಲರಾದ ಡಾ. ಕೆ.ಜಿ. ಕವಿತಾ ಮಾತನಾಡಿ, ಡಿಜಿಟಲ್ ಜಗತ್ತು ವಿದ್ಯಾರ್ಥಿಗಳ ಬೆಳವಣಿಗೆಗೆ ಪೂರಕವಾಗಿರಬೇಕೇ ಹೊರತು ಮಾರಕವಾಗಬಾರದು ಎಂದು ತಿಳಿಸಿದರು.

ಗ್ರಂಥಪಾಲಕ ಎಸ್. ಮಂಜುನಾಥ, ಐಕ್ಯೂಎಸಿ ಸಂಚಾಲಕ ಎಸ್. ಯೋಗೇಶ್, ಗಣಕ ವಿಭಾಗ ಮುಖ್ಯಸ್ಥ ಎಂ. ಬಾಲಕೃಷ್ಣ, ಸಹಾಯಕ ಪ್ರಾಧ್ಯಾಪಕಿ ಎನ್. ಸರಿತಾ, ಎಂ.ಪಿ. ಹರ್ಷ ಇತರರಿದ್ದರು.

# ಪ್ರತ್ಯೇಕ ಅಪಘಾತ ಇಬ್ಬರು ಸಾವು

ಹಾಸನ: ಆಲೂರು ಹಾಗೂ ಕೊಣನೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ಅರಕಲಗೂಡು ತಾಲ್ಲೂಕು ಚಿಕ್ಕಬೊಮ್ಮನಹಳ್ಳಿ ಗ್ರಾಮದ ಚಿಕ್ಕನಕಟ್ಟೆ ಕೆರೆ ಏರಿ ಮೇಲೆ ಟ್ರ್ಯಾಕ್ಟರ್ ಡಿಕ್ಕಿಯಾಗಿ ಪಾದಚಾರಿ ಮೃತಪಟ್ಟಿದ್ದಾರೆ. ಕೊಣನೂರು ಹೋಬಳಿ ಹಂಡ್ರಂಗಿ ಗ್ರಾಮದ ಲಿಂಗರಾಜು (51) ಮೃತರು. ಜಮೀನು ಕೆಲಸ ಮುಗಿಸಿಕೊಂಡು ಮಧ್ಯಾಹ್ನ ಮನೆಗೆ ವಾಪಾಸ್ಸಾಗುತ್ತಿದ್ದಾಗ ಕೆರೆ ಏರಿ ಮೇಲೆ ಎದುರುಗಡೆಯಿಂದ ವೇಗವಾಗಿ ಬಂದ ಟ್ರ್ಯಾಕ್ಟರ್ ಡಿಕ್ಕಿಯಾಗಿದೆ. ಕೊಣನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಟ್ರ್ಯಾಕ್ಟರ್‌ಲ್ಲಿ ತೆರಳುತ್ತಿದಾಗ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ಚಾಲಕ ಮೃತಪಟ್ಟಿರುವ ಘಟನೆ ಆಲೂರು ತಾಲ್ಲೂಕು ಕಣದಹಳ್ಳಿ ಸಮೀಪ ನಡೆದಿದೆ. ಅರೇಹಳ್ಳದಕೊಪ್ಪಲು ಗ್ರಾಮದ ಸಂದೀಪ್ (20) ಮೃತ. ಶುಂಠಿ ತುಂಬಿಕೊಂಡು ಹಾಸನಕ್ಕೆ ಬಂದಿದ್ದ ಆತ ವಾಪಾಸ್ ಹೋಗುವಾಗ ಕಣದಹಳ್ಳಿ ಸಮೀಪ ಇಳಿಜಾರಿನಲ್ಲಿ ಹಂಪ್ಸ್ ಹತ್ತಿಸಿದಾಗ ನಿಯಂತ್ರಣ ಸಿಗದೆ ಟ್ರ್ಯಾಕ್ಟರ್ ಪಲ್ಟಿಯಾಗಿದೆ. ಆಸ್ಪತ್ರೆಗೆ ಕರೆತರುತ್ತಿದ್ದಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಆಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248